

ಶಮೀ ಉಸಿರು ಸಿಕ್ಕು ಕಣ್ಣಲ್ಲಿ ನೀರು ಬರುವಷ್ಟು ದೊಡ್ಡದಾಗಿ ನಗಲು ಶುರು ಮಾಡಿದಳು. ನಗು ತಹಬಂದಿಗೆ ಬಂದ ನಂತರ ಸ್ಪಷ್ಟವಾಗಿ ತಿಳಿಸಿಬಿಡ್ತೀನಿ ನೋಡಿ ಸರ್ ಎಂಬ ಮುಖಭಾವದಲ್ಲಿ, 'ನಿಮಗಿದ್ದಂತೆಯೇ ಪ್ರೀತಿ, ಪ್ರೇಮ, ಸ್ನೇಹದ ಅವಶ್ಯಕತೆ ನಿಮ್ಮ ಹೆಂಡತಿಗೂ ಇರಬಹುದು. ನನಗೆ ಹೇಗೆ ಸಮಯ ಕೊಟ್ಟು ವಿವರವಾಗಿ ಹೇಳಿ ಅರ್ಥಮಾಡಿಸೋ ಪ್ರಯತ್ನ ಮಾಡಿದ್ರೋ ಹಾಗೆ ಅವರಿಗೂ ತಿಳಿಸುವ ಪ್ರಯತ್ನ ಮಾಡಿ. ಜಗಳ ಆಗತ್ತೆ, ಅವಳಿಗೆ ನಾನು ಬೇಕಿಲ್ಲ, ಸಂಬಳ ಕಮ್ಮಿ, ಮಗಳನ್ನ ದೂರ ಮಾಡಿದ್ದಾಳೆ ಎಂಬ ನೆಪಗಳನ್ನು ಹೇಳಬೇಡಿ. ಹುಡುಕಬೇಡಿ. ಮತ್ತೆ ನಿಮಗೆ ನನ್ನ ಮೇಲೆ ಇರೋದು ಪ್ರೀತಿಯಲ್ಲ. ಈಗಿರೋ ಪರಿಸ್ಥಿತಿಯಿಂದ ಎಸ್ಕೇಪ್ ಆಗುವ ಮಾರ್ಗ ಹುಡುಕುತ್ತಾ ಮನಸ್ಸು ಹೂಡಿರೋ ಕಳ್ಳಾಟ. ಇನ್ನು ಮೇಲೆ ಟೀ ಬ್ರೇಕಲ್ಲಿ ನನ್ನ ಕರೆಯಬೇಡಿ. ನಂಬರ್ ಡಿಲಿಟ್ ಮಾಡಿ. ಜಸ್ಟ್ ಮೂವ್ ಆನ್. ಒಳ್ಳೇದಾಗತ್ತೆ ಸರ್. ಬರ್ತೀನಿ' ಎಂದು ಎದ್ದು ಹೊರಟೇಬಿಟ್ಟಿದ್ದಳು. ಐದಾರು ವರ್ಷದ ಹಿಂದಾದರೆ ತಾನೇ ಮುಂದೆ ನಿಂತು ಇವನ ಬದುಕಿನ ಕಷ್ಟಗಳಿಗೆ ಉತ್ತರಿಸುವೆ ಎಂಬ ಸಾಹಸ ಮಾಡುತ್ತಿದ್ದಳೇನೋ...ಈಗ ಮಾತ್ರ 'ಯಾರ ಗ್ರಾಚಾರ ಯಾರು ತಿದ್ದೋಕಾಯ್ತದೆ ಬುಡವ್ವ..ಅವರವರ ಪಾಪ ಪುಣ್ಯ ಅವರದ್ದೇಯ' ಎಂಬ ಅಮ್ಮನ ಮಾತೇ ಸತ್ಯವೆನಿಸಿತ್ತು.

* * *

'ನಾವು ಜನರಿಂದ ದೂರವಾದರೂ ಅವರ ಸುದ್ದಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ನೋಡಿ' ಎಂದು ಮೋಹಕವಾಗಿ ನಗುವ ಶಮೀ ಸುತ್ತ ಒಂದು ಕಾಲದ ಪ್ರಮಥನಾಥನ ಅಸೋಸಿಯೇಟ್ಸ್ ನೆರೆದಿದ್ದರು.

ಕೆಲಸ ಕಳೆದುಕೊಂಡು, ಮನಶ್ಶಾಂತಿ ಕೆಡಿಸಿಕೊಂಡು ಡಿಪ್ರೆಶನ್ನಿನ ಮಾತ್ರೆ ನುಂಗುತ್ತಾ ದಿನದೂಡುತ್ತಿದ್ದ ಅವನನ್ನು ಹೆಂಡತಿ ವಿನುತಾ ಸಾಧ್ಯವಾದಷ್ಟು ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದಾಳಂತೆ. ಇವನು ಬರೆದ ಚಾರಿತ್ರ್ಯಹೀನ, ಧನದಾಹಿ, ಕಾಮುಕ ಹೆಂಗಸರ ಕಥೆಗಳು ಇವತ್ತಿಗೂ ಕ್ರೈಂ ಸ್ಟೋರಿಯಲ್ಲಿ ವರ್ಣರಂಜಿತವಾಗಿ ಬಿತ್ತರವಾಗುತ್ತಿವೆಯಂತೆ. ಸೆಂದಿಲ್ ಮೋಸಗಾರ ಗಂಡಸರ ಕಥೆಗಳನ್ನು ಬರೆಸಿ ಶೂಟ್ ಮಾಡಿದ ಎಪಿಸೋಡ್‌ಗಳಿಗೆ ಹೇಳಿಕೊಳ್ಳುವಂತಹ ರೆಸ್ಪಾನ್ಸ್, ರೀಚ್ ಸಿಗಲಿಲ್ಲವಂತೆ. ಈಗ ಸೆಂದಿಲ್ ಬೇರೆ ವಿಭಾಗಕ್ಕೆ ವರ್ಗಾವಣೆ ಪಡೆದು ಹಾಯಾಗಿದ್ದಾನಂತೆ. ಶಮಿತಾ ಪ್ರಿಂಟ್ ಮೀಡಿಯಾ ಇಂದ ಟಿವಿಗೆ ಬಂದು ನಾಲ್ಕಾರು ದಿನ ಕಳೆಯುವಷ್ಟರಲ್ಲಿ ಇಷ್ಟು ಸುದ್ದಿ ಅವಳಿಗೆ ತಾನಾಗಿಯೇ ಬಂದು ಮುಟ್ಟಿತ್ತು.'ಅವಳ ನಡತೆ ಸರಿಯಿಲ್ಲ. ಹುಷಾರು' ಎಂದು ಪ್ರಮಥನಾಥ ಅಸೋಸಿಯೇಟ್ಸ್‌ಗೆ ಕಳಿಸಿದ ಸಂದೇಶ ಏಕಕಾಲಕ್ಕೆ ಎಲ್ಲರ ಮೊಬೈಲ್‌ನಲ್ಲಿ ಟಣ್ ಟಣಾಟಣ್ ಅಂದಿತ್ತು. ●